PW-06

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.</u>**

ಸ್ಪೇಷಲ್ (ಎಸ್.ಸಿ./ಎಸ್.ಟಿ.) ಸಂಖ್ಯೆ: 367/2020

ದಿ: 28-06-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾಸಾ-06

ರಾಚಮ್ಮ

**<u>ಮುಂದುವರೆದು ಪಾಟೀ ಸವಾಲು: ಶ್ರೀ ಎಸ್.ವಾಯ್. ಆರೋಪಿಗಳ ಪರ ವಕೀಲರಿಂದ:</u>**

3. ಚಾಸಾ-2, 3, 5, 10 ಮತ್ತು ನಮ್ಮ ಮನೆಗಳು ಒಂದಕ್ಕೊಂದು ಹೊಂದಿಕೊಂಡು ಒಂದೇ ಸಾಲಿನಲ್ಲಿ ಇದೆ ಎಂಬುದು ಸರಿ.

4. ನಮ್ಮ ಮನೆಗಳ ಮುಂದೆ 20 ಅಡಿಗಳ ಅಗಲಿನ ರಸ್ತೆಯಿರುತ್ತದೆ ಎಂಬುದು ಸರಿ.

5. ನಮ್ಮ ಮನೆಯ ಎದುರಿಗೆ ರಸ್ತೆಯ ನಂತರ ಘಟನಾ ಸ್ಥಳ ಅದಾದ ಮೇಲೆ ಮಾರಮ್ಮ, ಅಕ್ತಾರ ಬೇಗಂ, ರಫಿ, ಮತ್ತು ಮಹಿಬೂಬ್ ಇವರ ಮನೆಗಳು ಇದ್ದು, ಅದಾದ ಮೇಲೆ 20 ಅಡಿ ರಸ್ತೆಯಿರುತ್ತದೆ ಎಂಬುದು ಸರಿ.

6. ಸದರಿ 20 ಅಡಿಯ ರಸ್ತೆಯಾದ ಮೇಲೆ ಚಾಸಾ-1 ಇವಳ ಮನೆ ಇರುತ್ತದೆ ಎಂಬುದು ಸರಿ.

7. ಸದರಿ ಮೇಲೆ ಹೇಳಿದ ಮನೆಗಳಲ್ಲಿ ಜನರು ವಾಸಮಾಡುತ್ತಾರೆ ಎಂಬುದು ಸರಿ.

PW-06

8. ಮಾರಮ್ಮನ ಮನೆಯ ಹಿಂದೆ ರಸ್ತೆಯಿದ್ದು, ಅದರ ನಂತರ ಚಾಸಾ-4 ಇವಳ ಮನೆ ಇರುತ್ತದೆ ಎಂಬುದು ಸರಿ.

9. ಚಾಸಾ-4 ಇವಳ ಮನೆಯ ಮುಂದೆ ಚಾಸಾ-7 ಇವಳ ಮನೆ ಇರುತ್ತದೆ ಎಂದರೆ ಆಚೆಗೆ ಹಿಂದೆ ಇರುತ್ತದೆ ಎಂದು ಹೇಳುತ್ತೇನೆ.

10. ಚಾಸಾ-7 ಇವರ ಮನೆಯ ಮುಂದೆ ಕುಳಿತರೇ ಚಾಸಾ-2 ಇವಳ ಮನೆಯ ಮುಂದೆ ಏನು ನಡೆಯುತ್ತಿದೆ ಎಂಬುದು ಕಾಣುವುದಿಲ್ಲ ಎಂಬುದು ಸರಿ.

11. ನಮ್ಮ ಮನೆಯ ಹಿಂದೆ ಪೂರ್ವಕ್ಕೆ 1 ನೇ ಆರೋಪಿತಳ ಮನೆ ಇರುತ್ತದೆ ಎಂಬುದು ಸರಿ.

12. ನಾವು ನಮ್ಮ ಮನೆಯ ಕಟ್ಟುವ ಸಮಯದಲ್ಲಿ 1 ನೇ ಆರೋಪಿತಳ ಜಾಗದಲ್ಲಿ 3 ಅಡಿ ನಾವು ಅತಿಕ್ರಮಣ ಮಾಡಿರುವ ವಿಚಾರದಲ್ಲಿ ನಮಗೂ ಮತ್ತು 1 ನೇ ಆರೋಪಿತಳಿಗೂ ಜಗಳವಾಗಿರುತ್ತದೆ ಎಂಬುದು ಸರಿಯಲ್ಲ.

13. ಆ ರೀತಿ ನಾನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂಬುದು ಸರಿಯಲ್ಲ.

14. 1 ನೇ ಆರೋಪಿತಳು ಮತ್ತು ನಮಗೂ ಆ ವಿಚಾರದಲ್ಲಿ ಮನಸಾ-ಮನಸು ಸರಿಯಿರುವುದಿಲ್ಲ ಎಂಬುದು ಸರಿ.

15. ಪ್ರಸ್ತುತ ಪ್ರಕರಣಕ್ಕಿಂತ ಮೊದಲು ಸುಮಾರು 7-8 ವರ್ಷಗಳ ಹಿಂದೆ ಬೋರವೆಲ್ ಹಾಕಿರುತ್ತಾರೆ.

16. ಅಕ್ಕೆ ಕೈ ಪಂಪು ಇನ್ನು ಹಚ್ಚಿರಲಿಲ್ಲ.

PW-06

17. 1 ನೇ ಆರೋಪಿತಳು ನಗರ ಸಭೆಯ ಸದಸ್ಯಳಾಗಿದ್ದಳು ಎಂದರೆ ಬೇರೆ ವಾರ್ಡಿಗೆ ಆಗಿದ್ದಳು ಎಂದು ಹೇಳುತ್ತೇನೆ.

18. ನಮ್ಮ ಮನೆ ಅಬು ಮಹುಲಾ ಪ್ರದೇಶದಲ್ಲಿ ಇರುತ್ತದೆ.

19. ಅದು ನೇಕಾರಾರರ ಓಣಿಯಾಗಿರುತ್ತದೆ ಎಂಬುದು ಸರಿ.

20. ಪಟೇಲ್ ಓಣಿ ಮತ್ತು ನೇಕಾರರ ಓಣಿಯ 1 ನೇ ಆರೋಪಿತಳು ನಗರ ಸಭಾ ಸದಸ್ಯಳಾಗಿದ್ದಳು ಎಂಬುದು ಸರಿಯಲ್ಲ.

21. ನೀರಿನ ಕೊರತೆಯಾಗಿದ್ದರಿಂದ 1 ನೇ ಆರೋಪಿತಳಿಗೆ ನಾವು ಅಂದರೆ ಚಾಸಾ-2, 3, 5, 6 ಎಲ್ಲರು ವಿನಂತಿ ಮಾಡಿಕೊಂಡ ಮೇರೆಗೆ ಸದರಿ ಇವಳು ಸಿಮೆಂಟಿನ ಟ್ಯಾಂಕನ್ನು ಕೂಡಿಸಿದ್ದಳು ಎಂಬುದು ಸರಿ.

22. ಮೊದಲು ಸದರಿ ಟ್ಯಾಂಕನ್ನು ಚಾಸಾ-1 ಇವಳ ಮನೆಯ ಮುಂದೆ ಕೂಡಿಸಲು ತೀರ್ಮಾನಿಸಿದ್ದು, ನಂತರ ಅವಳು ಅಲ್ಲಿ ಬೇಡ ಎಂದು ಹೇಳಿದ್ದಕ್ಕೆ ಚಾಸಾ-7 ಇವಳ ಮನೆಯ ಮುಂದೆ ಕೂಡಿಸಿರುತ್ತಾರೆಂಬುದು ಸರಿ.

23. ನಮ್ಮ ಮನೆಯ ಮುಂದೆ ಹೋಗುವ ದಾರಿಯು ಗುಡ್ಡದ ಕಡೆಗೆ ಹೋಗುತ್ತಿದ್ದು ಅಲ್ಲಿ ನಮ್ಮ ಓಣಿಯ ಜನ ಬಹಿರ್ದೆಸೆಗೆ ಹೋಗುತ್ತಿದ್ದರು ಎಂಬುದು ಸರಿ.

24. ಸದರಿ ಜಾಗದಲ್ಲಿ 1 ನೇ ಆರೋಪಿತಳ ಸದಸ್ಯತ್ವದ ಸಮಯದಲ್ಲಿ 1 ಕಂಪೌಂಡ್ ಗೋಡೆ ಕಟ್ಟಿರುತ್ತಾರೆಂದರೆ ಸರಕಾರದವರು ಕಟ್ಟಿರುತ್ತಾರೆ ಎಂದು ಹೇಳುತ್ತೇನೆ.

PW-06

25. ಆ ಕಾರಣ ಗೋಡೆ ಕಟ್ಟಿ ತೊಂದರೆ ಕೊಟ್ಟಿರುತ್ತಾರೆಂದು 1 ನೇ ಆರೋಪಿತಳ ವಿರುದ್ಧ ದ್ವೇಷ ಸಾಧಿಸುತ್ತಿದ್ದೇವೆಂಬುದು ಸರಿಯಲ್ಲ.

26. ಘಟನೆಯ ಸಮಯದಲ್ಲಿ ಕೋವಿಡ್ ಇದ್ದಿದ್ದರಿಂದ ಸರಕಾರ, ಜನರು ಗುಂಪಾಗಿ ಕೂಡಬಾರದು ಎಂದು ನಿಷೇದ ಹೇರಿತ್ತು ಎಂಬುದು ಸರಿ.

27. ಘಟನೆಯ ಸಮಯದಲ್ಲಿ ನಾನು ನನ್ನ ಮನೆಯಲ್ಲಿಯೇ ಇದ್ದೆನು.

28. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಎಷ್ಟು ಜನ ಸೇರಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

29. ನಮ್ಮ ಓಣಿಯ ರಸ್ತೆಯ ಆಚೆ ಬದೆಗಿನ ಎಲ್ಲ ಮನೆಯವರು ಆ ಸಮಯದಲ್ಲಿ ಸೇರಿದ್ದರು.

30. ಸದರಿ ಘಟನೆಯು ಚಾಸಾ-2 ಇವಳ ಮನೆಯಲ್ಲಿಯೇ ಆಗಿರುತ್ತದೆ.

31. ಸದರಿ ಜಗಳ ಸಾಯಂಕಾಲ 05 ರಿಂದ 6 ಗಂಟೆಯವರೆಗೆ ನಡೆದಿರುತ್ತದೆ.

32. ಘಟನೆಯಾದ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು.

33. ಘಟನೆಯಾದ ನಂತರ ಸುಮಾರು 10-15 ನಿಮಿಷಗಳ ಕಾಲ ನಾನು ಅಲ್ಲಿಯೇ ಇದ್ದು, ನಾನು ನನ್ನ ಮನೆಗೆ ಹೋಗಿರುತ್ತೇನೆ.

34. ಚಾಸಾ-1 ಇವಳು ಅತೀಕ್ರಮಣ ಮಾಡಿ ಕಟ್ಟುತ್ತಿದ್ದಾಳೆ ಎಂದು ಸದರಿ ಕಟ್ಟಡವನ್ನು ನಿಲ್ಲಿಸಲು ಚಾಸಾ-2, 3, 5 ಇವರು ಒಂದನೇ ಆರೋಪಿತಳಿಗೆ ಭೇಟಿ ಮಾಡಿ ವಿನಂತಿಸಿಕೊಂಡಿರುತ್ತಾರೆಂದರೆ ಆ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳುತ್ತೇನೆ.

PW-06

35. ಚಾಸಾ-1 ಇವಳು ಈದಿನ ನನ್ನೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತಾಳೆ ಎಂಬುದು ಸರಿಯಲ್ಲ.

36. ಘಟನೆಯು ನಡೆದ ಸಮಯದಲ್ಲಿ ನಾನು ಅಲ್ಲಿ ಇರದೇ ಇದ್ದರೂ ಸಹ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

37. ಮೇಲೆ ಹೇಳಿದಂತೆ ಯಾವುದೇ ಘಟನೆ ನಡೆದಿರುವುದೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.